# ಸುರತ್ಕಲ್ ಎನ್ ಐಟಿಕೆ ನೂತನ ನಿರ್ದೇಶಕ ಪ್ರೊ. ಭಲ್ಲಮುಡಿ ರವಿ



**ಮಂಗಳೂರು:** ಎನ್ ಐಟಿಕೆ ಸುರತ್ಕಲ್‌ನ ನೂತನ ನಿರ್ದೇಶಕರಾಗಿ ಪ್ರೊ.ಭಲ್ಲಮುಡಿ ರವಿ ಅವರನ್ನು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ನೇಮಕ ಮಾಡಿದೆ.

ಇದುವರೆಗೆ ಹೆಚ್ಚುವರಿ ಪ್ರಭಾರ ನಿರ್ದೇಶಕರೂ ಆಗಿದ್ದ ಕ್ಯಾಲಿಕಟ್ ಎನ್ ಐಟಿ ನಿರ್ದೇಶಕ ಪ್ರೊ. ಪ್ರಸಾದ್ ಕೃಷ್ಣ ಅವರು ನೂತನ ನಿರ್ದೇಶಕ ಪ್ರೊ. ಭಲ್ಲಮುಡಿ ರವಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಈ ನೇಮಕಾತಿಗೆ ಮೊದಲು, ಪ್ರೊ.ಬಿ.ರವಿ ಅವರು ಐಐಟಿ ಮುಂಬೈಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಇನ್ಸ್ಟಿಟ್ಯೂಟ್ ಚೇರ್ ಪ್ರೊಫೆಸರ್ ಆಗಿದ್ದರು. ಎನ್ ಐಟಿ ರೂರ್ಕೆಲಾದ ಹಳೆಯ ವಿದ್ಯಾರ್ಥಿ, ಮತ್ತು ಐಐಎಸ್‌ಸಿ ಬೆಂಗಳೂರಿನಲ್ಲಿ ತಮ್ಮ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿ ಪೂರ್ಣಗೊಳಿಸಿದ್ದಾರೆ. ಪ್ರೊ. ಭಲ್ಲಮುಡಿ ಅವರು ಮೆಟಲ್ ಕಾಸ್ಟಿಂಗ್ ಮತ್ತು ಮೆಡಿಕಲ್ ಡಿವೈಸಸ್ ಕ್ಷೇತ್ರಗಳಲ್ಲಿನ ಕೊಡುಗೆಗಳಿಗೆ ಹೆಸರುವಾಸಿಯಾಗಿದ್ದಾರೆ.

Kannada Prabha, Date: 16/06/23 p, no - 02